ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU
CITY UNIVERSITY

Central College Campus, Dr. AmbedkarVeedhi, Bengaluru,
E-mail ID: registrarevlubcu@gmail.com, Ph.No: 080-22295559

ಸಂಖ್ಯೆ: ಬೆಂ.ನ.ವಿ/ಪ.ವಿ/NEP/2022-23 ದಿನಾಂಕ : 08.06.2023

# ಸುತ್ತೋಲೆ

**ವಿಷಯ: ವಿದ್ಯಾರ್ಥಿಗಳ ಹಾಜರಾತಿ, ಆಂತರಿಕ ಅಂಕಗಳು, ಪ್ರಾಯೋಗಿಕ ಪರೀಕ್ಷಾ ಅಂಕಗಳು, ಇತ್ಯಾದಿ ವಿವರಗಳನ್ನು ಕಾಲೇಜಿನ ಪೋರ್ಟಲ್‌ನ ಮೂಲಕ UUCMSಗೆ ಅಪ್ಲೋಡ್ ಮಾಡುವ ಬಗ್ಗೆ.**

ಈ ಮೂಲಕ ಬೆಂಗಳೂರು ನಗರ ವಿಶ್ವವಿದ್ಯಾನಿಲಯಗೆ ಸಂಯೋಜನೆಗೊಂಡಿರುವ ಎಲ್ಲಾ ಮಹಾ ವಿಶ್ವವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ತಿಳಿಸುವುದೇನೆಂದರೆ, UUCMS ಅಡಿಯಲ್ಲಿ ನಡೆದ 1ನೇ ಹಾಗೂ 3ನೇ ಸೆಮಿಸ್ಟರ್ ಪರೀಕ್ಷೆಗಳ ಮೌಲ್ಯಮಾಪನ ಮುಗಿಯುತ್ತಾ ಬಂದಿದೆ. ಮೌಲ್ಯಮಾಪನ ಕಾರ್ಯ ಮುಗಿದ ಕೂಡಲೇ ಫಲಿತಾಂಶ ಪ್ರಕಟಣೆಗೆ ಎಲ್ಲ ಸಿದ್ಧತೆ ಮಾಡಿಕೊಳ್ಳುವ ಅಗತ್ಯತೆ ಇದೆ. ಈಗಾಗಲೇ ಮುಂಜಾಗ್ರತ ಕ್ರಮವಾಗಿ, ಹಲವಾರು ಸುತ್ತೋಲೆಗಳನ್ನು ಕಳುಹಿಸಿ, ಈ ಹಿಂದೆ ಆಗಿರುವ ತೊಂದರೆಗಳನ್ನು ತಪ್ಪಿಸುವ ಸಲುವಾಗಿ ತುಂಬಾ ಮುನ್ನೆಚ್ಚರಿಕೆ ವಹಿಸಲಾಗಿದೆ. ತಾವೆಲ್ಲರೂ ಈ ಬಗ್ಗೆ ಸಾಕಷ್ಟು ಸಹಕರಿಸಿರುತ್ತೀರಿ. ಅದಕ್ಕಾಗಿ ಪರೀಕ್ಷಾ ವಿಭಾಗದ ವತಿಯಿಂದ ಎಲ್ಲರಿಗೂ ಅಭಿನಂದನೆಗಳು.

ಆದಾಗ್ಯೂ, ಕೆಲವೊಂದು ಅನಿರೀಕ್ಷಿತ ತೊಂದರೆಗಳು ಬರಬಹುದು. ಅವುಗಳಲ್ಲಿ ಮುಖ್ಯವಾದುವು :

1. ವಿದ್ಯಾರ್ಥಿಗಳ ಹಾಜರಾತಿಯನ್ನು ಮತ್ತು ಆಂತರಿಕ ಅಂಕಗಳನ್ನು UUCMS Portal ಗೆ upload ಮಾಡದೇ ಇರುವುದು.
2. ಪರೀಕ್ಷಾ ಪ್ರವೇಶ ಪತ್ರವನ್ನು Manual ಆಗಿ download ಮಾಡಿರುವ ಪ್ರಾಂಶುಪಾಲರು ಸದರಿ ವಿದ್ಯಾರ್ಥಿಗಳ ಪ್ರವೇಶ ಪತ್ರವನ್ನು UUCMS ಮೂಲಕ Generate ಮಾಡಬೇಕಾಗಿ ಕೋರಲಾಗಿದೆ. ಮತ್ತು ವಿದ್ಯಾರ್ಥಿ ಪರೀಕ್ಷೆ ಬರೆಯಲಿರುವ ಕೋರ್ಸುಗಳನ್ನು ಮರು ಪರಿಶೀಲಿಸುವುದು.
3. ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು UUCMS ನಲ್ಲಿ upload ಮಾಡುವುದು.
4. ಹೆಚ್ಚಿನ ಮಾಹಿತಿಗಾಗಿ ಮತ್ತು ಎಲ್ಲವನ್ನು ಮರು ಪರಿಶೀಲಿಸಲು, ಪ್ರಾಂಶುಪಾಲರು Portal ನಲ್ಲಿ ಲಾಗಿನ್ ಆಗಿ Checklist ನ್ನು ನೋಡುವುದು.

ಮೇಲೆ ತೋರಿಸಿದ ವಿಷಯಗಳನ್ನು ಗಮನದಲ್ಲಿರಿಸಿ, ಏನಾದರೂ ತೊಂದರೆಗಳಿದ್ದಲ್ಲಿ ದಿನಾಂಕ 20.06.2023 ರ ಒಳಗೆ ಬಗೆಹರಿಸಿಕೊಳ್ಳುವುದು ತಮ್ಮ ಜವಾಬ್ದಾರಿ. ಫಲಿತಾಂಶ ಪ್ರಕಟಣೆಗೊಳ್ಳುವ ಸಮಯದಲ್ಲಿ ಏನಾದರೂ ತಪ್ಪುಗಳಾದಲ್ಲಿ, ಅದಕ್ಕೆ ಮಹಾವಿದ್ಯಾಲಯಗಳೇ ಜವಾಬ್ದಾರರಾಗುತ್ತಾರೆ.

ROK
ಕುಲಸಚಿವರು (ಮೌಲ್ಯಮಾಪನ)

**ಕುಲಸಚಿವರು (ಮೌಲ್ಯಮಾಪನ)**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**
**ಸೆಂಟ್ರಲ್ ಕಾಲೇಜು ಕ್ಯಾಂಪಸ್**
**ಬೆಂಗಳೂರು - 560 001**

ಗೆ,

1. ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ ಬೆಂಗಳೂರು.
2. ಕುಲಪತಿಯವರು/ಕುಲಸಚಿವರು (ಆ)/ ಕುಲಸಚಿವರು (ಮೌ)/ ಹಣಕಾಸು ಅಧಿಕಾರಿಗಳ ಆಪ್ತ ಶಾಖೆ, ಬೆಂ.ನ.ವಿ. ಬೆಂಗಳೂರು.
3 ವಿಶ್ವವಿದ್ಯಾಲಯ ವೆಬ್ಸೈಟ್ ನಿರ್ವಾಹಕರು, ಬೆಂ.ವಿ.ಬೆಂ.
4 [illegible]